

# ಕೆನಡಾದಿಂದ ಬಂದ ರಾಜಕುಮಾರಿ

ಮಲಯಾಳ ಮೂಲ: **ಹರಿಕುಮಾರ್**

ಕನ್ನಡಕ್ಕೆ: **ಡಾ। ಅಶೋಕ್‌ಕುಮಾರ್**

**ಕೆಲವೆ ದಿನಗಳ ಮಟ್ಟಿಗಾದರೂ ಆಕೆ ಆ ಮನೆಯವರ ಮನದಂಗಳದಲ್ಲಿ ಬೆಳದಿಂಗಳನ್ನು ಸುರಿದು ಹಲವು ರಾಗಗಳನ್ನು ಕರೆದಿದ್ದಳು.**

ತಾಯಿ ಗೊರಿಲ್ಲಾ ನದಿಯಾಚೆ ಒಂದು ದೊಡ್ಡ ಪಂಜರದಲ್ಲಿ ಸೆರೆಯಾಗಿದೆ. ಪಂಜರದ ಹೊರಗೆ ಒಬ್ಬ ಕಾವಲುಗಾರನಿದ್ದಾನೆ. ನದಿಯ ತುಂಬ ಮೊಸಳೆಗಳಿವೆ. ಆಕಾಶದಲ್ಲಿ ಹಾರುತ್ತಿದ್ದ ಉಗ್ರ ರಣಹದ್ದುಗಳು. ಇವುಗಳ ನಡುವೆ ಹಾದು ತಾಯಿಯನ್ನು ರಕ್ಷಿಸಲು ಮರಿ ಗೊರಿಲ್ಲಾ ಹೋಗಬೇಕು. ಮರದ ಕೊಂಬೆಯಲ್ಲಿ ನೇತಾಡುತ್ತಿರುವ ಬೀಗದಕೈಯನ್ನು ನೆಗೆದು ತೆಗೆದುಕೊಂಡು ಪಂಜರದ ಬಾಗಿಲನ್ನು ತೆರೆಯಬೇಕು. ಗುರಿ ತಪ್ಪಿದರೆ ಮುಖ ನೆಲಕ್ಕಪ್ಪಳಿಸಿ ಬೀಳುವುದೇ. ಅಜಿತ್ ಮಾಡುತ್ತಿದ್ದುದು ಮರಿ ಗೊರಿಲ್ಲಾದ ಮಾರ್ಗವನ್ನು ಸುಗಮಗೊಳಿಸುವ ಕಾರ್ಯವನ್ನಷ್ಟೆ. ಎದುರಿಗೆ ಮೊಸಳೆ ಬಂದರೆ ಅವನು ಗೊರಿಲ್ಲಾ ಜಿಗಿಯುವಂತೆ ಮಾಡುತ್ತಿದ್ದ. ನಂತರ ಸ್ವಲ್ಪ ದೂರ ಅದರ ಯಾತ್ರೆ ಮರದ ಕೊಂಬೆಗಳಿಂದ ಕೊಂಬೆಗಳಿಗೆ ಹಾರುತ್ತಾ ಸಾಗುವುದು. ಅಷ್ಟರಲ್ಲಿ ರಣಹದ್ದುಗಳು ಹಿಂದಿನಿಂದ ಬರುವುವು. ಆಗ ಅಜಿತ್ ಗೊರಿಲ್ಲಾವನ್ನು ನೆಲಕ್ಕಿಳಿಸುತ್ತಿದ್ದ. ಎಲ್ಲವನ್ನೂ ದಾಟಿ ಮರುದಂಡೆಯನ್ನು ತಲುಪಿದರೆ ಕೊಂಬೆಯಲ್ಲಿ ಕಟ್ಟಲ್ಪಟ್ಟ ಬೀಗದ ಕೈಗೋಸ್ಕರ ಒಂದು ನೆಗೆತ. ಬೀಗ ತೆರೆಯುವಾಗ ತಾಯಿ ಗೊರಿಲ್ಲ ನಗುತ್ತದೆ. ಕೀ ಕೀ ಕೀ. ಇವನ್ನೆಲ್ಲ ಅವನು ನಡೆಸುತ್ತಿದ್ದುದು ಐದು ಕೆಂಪು ಬಟನ್‌ಗಳನ್ನು ಅದುಮುವ ಕ್ರಿಯೆಯಿಂದ. ಅವನ ಕೈಚಳಕ ಚಕಿತಗೊಳಿಸುವಂತಿತ್ತು. ಮೊಸಳೆಯ ಬಾಯಿಗೆ ಬೀಳದೆ, ರಣಹದ್ದುಗಳ ಕೊಕ್ಕಿಗೆ ಸಿಕ್ಕದೆ ಆ ಮರಿಗೊರಿಲ್ಲಾವನ್ನು ಅವನು ಅತಿವೇಗವಾಗಿ ನಿರ್ದಿಷ್ಟ ಸ್ಥಾನಕ್ಕೆ ತಲುಪಿಸುತ್ತಿದ್ದ. ಸ್ಕೋರ್ ಬೋರ್ಡ್‌ನಲ್ಲಿ ಅವನ ಸ್ಕೋರ್ ಧುತ್ತೆಂದು ಏರಿ ಹೋಗುತ್ತಿತ್ತು.

ಅಜಿತ್ ಸ್ಕೂಲಿಗೆ ಹೋದ ಹೊತ್ತು ನೋಡಿ ಆತ ಆ ವಿಡಿಯೋ ಗೇಮ್ಸ್ ತೆಗೆದುಕೊಂಡ. ಆಡಲು ಯತ್ನಿಸಿದ. ನಾಲ್ಕು ಹೆಜ್ಜೆ ಮುಗಿಸುವಷ್ಟರಲ್ಲಿ ಬಾಯಿ ತೆರೆದು ಬಂದ ಒಂದು ಮೊಸಳೆ ಗೊರಿಲ್ಲಾವನ್ನು ಆತನಿಗೆ ಬಟನ್ ಒತ್ತಿ ಅದನ್ನು ಜಿಗಿಸಲೂ ಅವಕಾಶಕೊಡದಷ್ಟು ಬೇಗನೆ, ಹಿಡಿಯಿತು. ಗೊರಿಲ್ಲಾದ ಚೀ ಚೀ ಎಂದು ಅಳುವ ಶಬ್ದ. ಅಜಿತ್ ಜೊತೆಯಲ್ಲಿದ್ದರೆ ಹಾಗಾಗಲು ಬಿಡುತ್ತಿರಲಿಲ್ಲ. ಮರಿಗೊರಿಲ್ಲಾವನ್ನು ಮೊಸಳೆಯಾಗಲೀ ರಣಹದ್ದಾಗಲೀ ಹಿಡಿಯುವುದು ಅವನಿಗೆ ಸಹಿಸಲಾಗದ ಸಂಗತಿ. ಅವನು ವಿಡಿಯೋ ಗೇಮನ್ನು ತಟ್ಟನೆ ಕಸಿದುಕೊಳ್ಳುತ್ತಿದ್ದ. ಅವಸರದಿಂದ ಕೆಂಪು ಬಟನ್‌ಗಳನ್ನು ಒತ್ತುತ್ತಿದ್ದ. ಒಂದು ತುರ್ತು ಪರಿಸ್ಥಿತಿ ಜಾರಿಗೆ ಬಂದಿದೆ. ಅವನು ಅದರಲ್ಲಿ ತಲ್ಲೀನನಾಗುವನು. ಪರಿಸರವನ್ನೇ ಮರೆಯುವನು. ಸ್ಕೋರ್ ಬೋರ್ಡ್‌ನಲ್ಲಿ ಸ್ಕೋರ್ ಹೆಚ್ಚುತ್ತ ಹೋಗುವುದು.

ಆತ ವಿಮಲಳಿಗೆ ಹೇಳುತ್ತಿದ್ದ, "ನೀನು ಮಗನ ಪ್ರೋಗ್ರೆಸ್ ಕಾರ್ಡ್ ನೋಡಿದೆಯಾ?"

"ನೋಡಿದೆ."

"ಏನು ನಿನ್ನ ಅಭಿಪ್ರಾಯ?"

ಆತನ ಸ್ವರದಲ್ಲಿ ಆಕ್ಷೇಪಣೆಯಿತ್ತು. ಮಗನ ಓದಿನ ಪೂರ್ಣ ಹೊಣೆಗಾರಿಕೆ ಹೆಂಡತಿಯದೇ ಎಂದೂ ಅವನ ಮಾರ್ಕ್ ಕಡಿಮೆಯಾದರೆ ಅದರ ಪೂರ್ಣ ಜವಾಬ್ದಾರಿಯನ್ನು ಹೆಂಡತಿಯೇ ಹೊರಬೇಕು ಎಂದೂ ಆ ಪ್ರಶ್ನೆಯಲ್ಲಿ ಧ್ವನಿಸುತ್ತಿತ್ತು.

"ಮೊದಲು ಒಳ್ಳೇ ವಿಷಯ ಹೇಳ್ತೇನೆ" ವಿಮಲ ಹೇಳಿದಳು, "ಇಂಗ್ಲಿಷ್‌ನಲ್ಲಿ ಶೇಕಡಾ ತೊಂಬತ್ತೆರಡು ಗಳಿಸಿದ್ದಾನೆ. ಸಯನ್ಸ್‌ನಲ್ಲಿ ಎಂಬತ್ತೆಂಟು. ಹಿಂದಿಯಲ್ಲಿ ಎಪ್ಪತ್ತು. ಗಣಿತದಲ್ಲಿ ಸ್ವಲ್ಪ ಹಿಂದೆ ಬಿದ್ದಿದ್ದಾನೆ. ಹಾಗೆಯೇ ಸಂಸ್ಕೃತದಲ್ಲೂ..."

"ಮಾರ್ಕ್ಸ್ ಎಷ್ಟೆಂತ ಹೇಳಲಿಲ್ಲ."

"ಗಣಿತದಲ್ಲಿ ಐವತ್ತೆರಡು. ಸಂಸ್ಕೃತದಲ್ಲಿ ಅರುವತ್ತು."

"ನಾನು ಮೊದಲೇ ಹೇಳುತ್ತಿದ್ದೆನಲ್ಲ, ಅವನಿಗೆ ಗಣಿತದಲ್ಲಿ ಟ್ಯೂಷನ್ ಕೊಡುವುದು ಒಳ್ಳೇದಂತ."

"ಅದಕ್ಕೆ ತಕ್ಕ ಟೀಚರ್ ಸಿಗಬೇಕಲ್ಲ? ಸುನೀಗೆ ಟ್ಯೂಷನ್ ಹೇಳುವ ಟೀಚರ್ ಅವನಿಗೆ ಹಿಡಿಸಲಿಲ್ಲ. ನೋಡಲು ಚೆಂದವಿಲ್ಲವಂತೆ! ಅಪ್ಪನಂತೇ ಮಗ."

ಅವನು ಹೇಳುವುದೂ ನಿಜ. ವಿಜಯನ್ ಯೋಚಿಸಿದ. ಒಂದೆರಡು ಗಂಟೆಗಳ ಕಾಲ ಒಬ್ಬ ವ್ಯಕ್ತಿಯೊಂದಿಗೆ ಕುಳಿತುಕೊಳ್ಳಬೇಕೆಂದರೆ, ಆ ವ್ಯಕ್ತಿಗೆ ಸ್ವಲ್ಪ ಸೌಂದರ್ಯವೂ ಇದ್ದರೆ ಬೇಸರವಾಗುವುದಿಲ್ಲ.

ಹೀಗಿರುವಾಗ ಒಂದು ದಿನ ವಿಮಲ ಹೇಳಿದಳು, "ಒಬ್ಬರು ಟ್ಯೂಷನ್ ಟೀಚರ್ ಸಿಕ್ಕಿದ್ದಾರೆ."

ಅವಳು ಜಾಸ್ತಿ ಏನೂ ಹೇಳಲಿಲ್ಲ. "ನಾಳೆಯಿಂದ



⇨ TWO

## ಕಥೆ

ಭೂಮಿ, ಮನೆಯನ್ನು ಅವರಿಗ ಕೊಟ್ಟರು. ಅಷ್ಟು, ಅವೆಲ್ಲ ಹಳೆಯ ಕತೆಗಳು."

ಯಾರೂ ಕೇಳಿಸಿಕೊಳ್ಳುತ್ತಿಲ್ಲ ಎಂದು ಖಚಿತಪಡಿಸಿಕೊಂಡು ಅಜಿತ್ ತಾಯಿಯನ್ನು ಕೇಳುತ್ತಿದ್ದ.

"ನಾನು ದೊಡ್ಡವನಾದ ಮೇಲೆ ಒಬ್ಬ ರಾಜಕುಮಾರಿಯನ್ನು ಮದುವೆಯಾಗಲು ಸಾಧ್ಯವೇ?"

"ಯಾಕೆ ಸಾಧ್ಯವಿಲ್ಲ? ನಿನ್ನನ್ನು ನೋಡಿದರೆ ರಾಜಕುಮಾರ ಅಲ್ಲ ಅಂತ ಯಾರು ಹೇಳ್ತಾರೆ ಮರೀ?"

"ಅಮ್ಮಾ, ನೀಲು ನಿಜವಾಗಿಯೂ ಒಬ್ಬ ರಾಜಕುಮಾರಿಯೇ?"

"ಇರಬಹುದು" ವಿಮಲ ಕೈ ತಿರುಗಿಸಿದಳು. "ನನಗೆ ಗೊತ್ತಿಲ್ಲ. ಯಾಕೋ ನೀನು ನೀಲೂನ ಮದುವೆಯಾಗಬೇಕೆ?"

ಅಜಿತ್‌ನ ಮುಖ ನಾಚಿಕೆಯಿಂದ ಕೆಂಪಾಯಿತು,

"ಹೋಗಮ್ಮಾ, ನಾನು ನಿನ್ನ ಹತ್ರ ಮಾತಾಡಲ್ಲ."

ಅವನು ಓಡಿ ಹೋದ.

ಬೆಳಗಾದೊಡನೆ, ವಿಮಲ ಮಾಡುವ ತಿಂಡಿಯ ರುಚಿ ನೋಡಲು, ನೀಲು ಓಡಿ ಬರುತ್ತಾಳೆ. ಅಜಿತ್‌ನ ಹೋಮ್ ವರ್ಕ್ ಎಲ್ಲ ಸರಿಯಾಗಿದೆಯೇ ಎಂದು ನೋಡಲು, ವಿಜಯಣ್ಣನೊಂದಿಗೆ ಜಗಳವಾಡಲು ಓಡಿ ಬರುತ್ತಾಳೆ. ನೀಲುವಿಗೆ ಸಿಟ್ಟು ಬರಿಸಲು ಆತ ಹೇಳುತ್ತಾನೆ.

"ಈ ಹುಡುಗೀಗೆ ಮನೇಲಿ ಬೇರೆ ಕೆಲಸ ಇಲ್ಲ. ಬೆಳಗಾದ ತತ್‌ಕ್ಷಣ ಓಡಿಬರ್ತಾಳೆ."

"ಹೌದ್ಹೌದು" ವಿಮಲ ಹೇಳುತ್ತಾಳೆ. "ಎರಡು ತಿಂಗಳಲ್ಲಿ ಅವಳ ಕ್ಲಾಸ್‌ಗಳು ಆರಂಭವಾಗುತ್ತವೆ. ಆಮೇಲೆ ಅವಳನ್ನು ಬಾ ಅಂದ್ರೂ ಬರಲ್ಲವಲ್ಲ? ಆಗ ಅಪ್ಪ ಮಗ ನೀಲುವನ್ನು ಹುಡುಕ್ತಾ ಹೋಗ್ಬೇಕಾಗುತ್ತೆ. ಆಗ ತಿಳಿಯುತ್ತೆ ನೀಲುವಿನ ಬೆಲೆ."

ನೀಲುವಿನ ಚೆಲುವಿನ ಮುಖದಲ್ಲಿ ಗಲಿಬಿಲಿ.

"ಸಾರಿ ರಾಜಕುಮಾರಿ." ಆತ ಹೇಳುತ್ತಾನೆ. "ನಾನು ತಮಾಷೆಗೆ ಹಾಗೆಂದೆ ಗೊತ್ತಾ?" ತಳಮಳ. ಅದು ಸ್ವಲ್ಪ ಹೊತ್ತು ಮಾತ್ರ.

"ಅಣ್ಣಾ, ನನ್ನ ಎರಡು ಕ್ಯಾಸೆಟ್‌ಗಳನ್ನು ತೆಗೆದುಕೊಂಡು ಹೋಗ್ತೀನಿ. ಬಿಲ್ಲಿ ಓಷನ್ ಮತ್ತು ಆಹಾ, ಸಾಯಂಕಾಲ ತಂದ್ಕೊಡ್ತೀನಿ."

"ಹಾಗೇ ಆಗಲಿ ರಾಜಕುಮಾರಿ."

ರಾಜಕುಮಾರಿ ತನ್ನ ಚೈತ್ರಯಾತ್ರೆಯನ್ನು ಮುಂದುವರಿಸಿದಳು. ಅಜಿತ್‌ನ ಕನಸಿನ ಲೋಕಗಳಲ್ಲಿ, ವಿಮಲಳ ದಿನಚರ್ಯೆಗಳಲ್ಲಿ, ವಿಜಯನ ಅಭಿರುಚಿಗಳಲ್ಲಿ ನೀಲು ಚೈತ್ರ ಯಾತ್ರೆ ನಡೆಸಿದಳು. ನೀಲು ಗೆಲ್ಲಲೆಂದೇ ಬಂದವಳು. ಅವರು ಸೋಲುವುದಕ್ಕಾಗಿ ನಿಯೋಗಿಸಲ್ಪಟ್ಟವರು. ಸೋಲಿನ ಸುಖವನ್ನು ಅವರು ಅನುಭವಿಸಿದರು. ನೀಲು ಬರುವುದಕ್ಕಿಂತ ಹಿಂದಿನ ದಿನಗಳ ಬಗ್ಗೆ ಅವರು ನೆನೆಯಲೂ ಇಷ್ಟಪಡುತ್ತಿರಲಿಲ್ಲ. ಅವೆಲ್ಲ ಕರಾಳ ದಿನಗಳಾಗಿದ್ದವು. ಸೂರ್ಯನೇ ಇಲ್ಲದ ಕಪ್ಪುದಿನಗಳು. ಈಗ ಅವರ ಲೋಕ ನೀಲುವಿನಿಂದ ಪ್ರಕಾಶಮಾನವಾಗಿತ್ತು.

ಹಾಗಿರುವಾಗ ಒಂದು ದಿನ ಆತನ ದಿನಚರಿ ತಪ್ಪುತ್ತದೆ. ಆಫೀಸ್‌ನಲ್ಲಿ ಕೆಲಸ ಜಾಸ್ತಿಯಾಗಬಹುದು, ಅಥವಾ ಹೊರಬಂದಾಗ ಯಾರಾದರೂ ಪರಿಚಿತರು ಸಿಗಬಹುದು. ಇಂದು ಹಾಗಾಯಿತು. ಆಫೀಸಿನಿಂದ ಹೊರಕ್ಕೆ ಬಂದೊಡನೆ ಕಂಡ ಪರಿಚಿತನೊಬ್ಬ ಆತನನ್ನು ಬಿಡಲಿಲ್ಲ. ಜಿಗಣೆಯ ಹಾಗೆ ಮೈಗೆ ಕಚ್ಚಿ ಅಂಟಿಕೊಂಡ ಆ ವ್ಯಕ್ತಿಯನ್ನು ತೊಲಗಿಸಲು ರೆಸ್ಟೋರೆಂಟ್‌ಗೆ ಕರೆದುಕೊಂಡು ಹೋಗಿ ಚಹಾ ಕುಡಿಸಬೇಕಾಯಿತು. ಎಲ್ಲ ಮುಗಿಸಿ ಮನೆ ತಲುಪುವಷ್ಟರಲ್ಲಿ ತಡವಾಯಿತು. ಗಂಟೆ ಏಳನ್ನು ದಾಟಿತ್ತು. ಆದರೂ ಅಡಿಗೆ ಕೋಣೆಯಲ್ಲಿ ಮಾತ್ರ ದೀಪ ಹಾಕಲಾಗಿತ್ತು. ಸಾಮಾನ್ಯವಾಗಿ ಹಾಗಿರುತ್ತಿರಲಿಲ್ಲ. ಅಡಿಗೆಮನೆಯೊಳಕ್ಕೆ ಕಾಲಿಟ್ಟನಾತ. ಒಳಗೆ ಮಂಕಾದ ಬೆಳಕಿನಲ್ಲಿ ವಿಮಲ ಕುಳಿತಿದ್ದಳು.

"ನಮ್ಮ ನೀಲು ಹೋದಳು" ವಿಮಲ ಹೇಳಿದಳು.

ವಿಮಲ ಅಳುತ್ತಿದ್ದಳೆಂದು ಆತನಿಗೆ ತೋರಿತು.

"ಅವಳು ಮರಳಿ ಕೆನಡಾಗೆ ಹೋಗುತ್ತಾಳೆ. ಇವತ್ತು ಸಂಜೆ ಅವಳು ತನ್ನ ಮಾವನ ಜೊತೆಗೆ ಹೋದಳು. ಬೆಂಗಳೂರಿಗೆ ಹೋದಳು. ಅಲ್ಲಿಂದ ಬಾಂಬೆಗೆ ಹೋಗ್ತಾಳೆ."

ಆತ ಕರ್ಚಿಯಲ್ಲಿ ಕುಳಿತ. ಇದು ತೀರಾ ಅನಿರೀಕ್ಷಿತವಾಗಿತ್ತು.

"ಇಷ್ಟು ದಿಢೀರೆಂದು?"

"ಏನೋ ಇಮಿಗ್ರೇಷನ್ ತಕರಾರಂತೆ. ಅಜ್ಜಿ ಹೇಳುತ್ತಿದ್ದರು. ಅವಳು ಇಲ್ಲಿ ಕಾಲೇಜ್‌ಗೆ ಸೇರುವುದು ಸಾಧ್ಯವಿಲ್ಲವಂತೆ. ಅದ್ದರಿಂದ ಅವಳ ಅಪ್ಪ ಕೆನಡಾದಿಂದ ಟಿಕೆಟ್ ಕಳಿಸಿಕೊಟ್ಟಿದ್ದಾರೆ. ಈ ಶುಕ್ರವಾರ ಹೊರಡಬೇಕು. ಅದಕ್ಕೇ ಬಾಂಬೆಯಿಂದ ಅವಳ ಮಾವ ಬಂದಿದ್ದು. ಆತ ಇವತ್ತೇ ಬೆಂಗಳೂರು ಮಾರ್ಗವಾಗಿ ಬಾಂಬೆಗೆ ಹೋಗ್ತಾರೆ. ಜೊತೆಯಲ್ಲಿ ಅವಳನ್ನೂ ಕರೆದುಕೊಂಡು ಹೋದರು."

ಆತ ಏನೂ ನುಡಿಯಲಾಗದೆ ಕುಳಿತ. ಎದ್ದು ಲೈಟ್‌ನ ಸ್ವಿಚ್ ಹಾಕಲು, ಸುತ್ತಲೂ ಕವಿದ ಕತ್ತಲನ್ನು ಹೋಗಲಾಡಿಸಲು ಆತನಿಂದ ಸಾಧ್ಯವಾಗಲಿಲ್ಲ. ತನ್ನನ್ನು ಬಹಳ ಆಕರ್ಷಿಸಿದ ಆ ಮುಖ ಇನ್ನು ಕಾಣಿಸದು ಎಂದು ಆತ ಅರಿತ.

"ನಿಮಗಾಗಿ ಬಹಳ ಹೊತ್ತು ಕಾದಿದ್ದು ನೀಲು. ಹೋಗ್ತೀನಿ ಅಂತ ಹೇಳೋಕೆ."

"ಅವರು ಎಷ್ಟು ಗಂಟೆಗೆ ಹೋದ್ರು?"

"ಆರು ಗಂಟೆಗೆ. ಬಸ್ಸು ಆರೂವರೆಗೆ ಇತ್ತು. ನೀವೇಕೆ ಇವತ್ತು ಇಷ್ಟು ತಡಮಾಡಿದ್ರಿ?"

"ತಡಮಾಡಿದೆ."

"ಅವಳು ಅಳುತ್ತಿದ್ದಳು, ಹೋಗುವಾಗ. ಬಹಳ ಹೊತ್ತು ಆ ಕುರ್ಚಿಯಲ್ಲಿ ಕಾದು ಕುಳಿತಿದ್ದಳು. ಹಾಂ, ನಿಮಗೊಂದು ಪತ್ರ ಮತ್ತು ಹಲವು ಕ್ಯಾಸೆಟ್‌ಗಳನ್ನು ಅವಳು ಮೇಜಿನ ಮೇಲೆ ಇಟ್ಟಿದ್ದಾಳೆ."

ಮೇಜಿನ ಮೇಲೆ ನಾಲ್ಕೈದು ಕ್ಯಾಸೆಟ್‌ಗಳ ಅಡಿಯಲ್ಲಿ ಒಂದು ಕಾಗದ.

"ಡಿಯರ್ ಅಣ್ಣಾ, ಗುಡ್‌ಬೈ. ನಾನು ಕಾದೆ. ನಿಮ್ಮನ್ನು ಕಾಣಲಾಗಲಿಲ್ಲ. ಕೆಲವು ಕ್ಯಾಸೆಟ್‌ಗಳನ್ನು ಇಡುತ್ತೇನೆ. ಬೈ. ಲವ್—ಅಣ್ಣನ ರಾಜಕುಮಾರಿ."

ಸೊಟ್ಟಗಿನ ಅಕ್ಷರಗಳಲ್ಲಿ ಒಂದು ಸಣ್ಣ ಮಗುವಿನಂತೆ ಬರೆದಿದ್ದ ಆ ಪತ್ರವನ್ನು ಆತ ಪುನಃ ಓದಿದ.

ವಿಮಲ ಲೈಟ್ ಹಾಕದಿರಲಿ ಎಂದು ಆತ ಬಯಸಿದ. ತನ್ನ ಕಣ್ಣುಗಳಿಂದ ಉರುಳಿದ ಜಲಕಣಗಳನ್ನು ಅಂಗಿಯ ತೋಳಿನಿಂದ ವಿಮಲಳಿಗೆ ಕಾಣಿಸದಂತೆ ಆತ ಒರೆಸಿಕೊಂಡ. ಆಗ ಆತನಿಗೆ ಕೇಳಿಸಿತು. ಕೀ ಕೀ ಕೀ ಎಂಬ ಒಂದು ಶಬ್ದ. ಅದೇನೆಂದು ಅರಿವಾಗಲು ಸ್ವಲ್ಪ ಹೊತ್ತು ಹಿಡಿಸಿತು. ಕಳೆದ ಎರಡು ತಿಂಗಳಿಂದ ಮನೆಯಲ್ಲಿ ಈ ಶಬ್ದ ಉಂಟಾಗಿರಲಿಲ್ಲ. ಆತ ಪಕ್ಕದ ಕೋಣೆಯ ಬಾಗಿಲಲ್ಲಿ ಹೋಗಿ ನೋಡಿದ. ಅಲ್ಲಿ ಮಂಚದಲ್ಲಿ ಮಲಗಿ ಕಿಟಿಕಿಯ ಮೂಲಕ ಬರುತ್ತಿದ್ದ ಮಂದ ಪ್ರಕಾಶದಲ್ಲಿ ಅಜಿತ್ ವಿಡಿಯೋಗೇಮ್ ಆಡುತ್ತಿದ್ದ.

ಆತ ಹಿಂತಿರುಗಿ ಬಂದು ಟೇಪ್‌ರೆಕಾರ್ಡರ್ ಆನ್ ಮಾಡಿದ. ಬ್ರೇಕ್ ಡಾನ್ಸ್‌ನ ಬೀಟ್. ಆತ ಟೇಪ್‌ರೆಕಾರ್ಡರ್ ಆಫ್ ಮಾಡಿದ. ಮೇಜಿನ ಡ್ರಾಯರ್‌ನಲ್ಲಿ ಹುಡುಕಿದಾಗ ರಫಿಯ ಹಳೆಯ ಹಾಡುಗಳ ಒಂದು ಕ್ಯಾಸೆಟ್ ಸಿಕ್ಕಿತು. ಒಂದು ಟವಲ್‌ನಿಂದ ಆತ ಟೇಪ್‌ರೆಕಾರ್ಡನ್ನು ಚೆನ್ನಾಗಿ ಒರೆಸಿದ. ರಫಿಯ ಕ್ಯಾಸೆಟ್ ಹಾಕಿ ಟೇಪ್‌ರೆಕಾರ್ಡರನ್ನು ಆನ್ ಮಾಡಲು ಒಂದು ಕ್ಷಣ ಯೋಚಿಸಿದ. ಬಳಿಕ ಬೇಡವೆಂದು ತೀರ್ಮಾನಿಸಿದ. ಬರಲಿರುವ ಕಪ್ಪು ದಿನಗಳನ್ನು ಎದುರಿಸಲು ಆತನಿಗೆ ಇನ್ನೂ ಸ್ವಲ್ಪ ತಯಾರಿ ಬೇಕಾಗಿತ್ತು. ●

BACK TO MAIN PAGE